# 5

# ಸದಾ ಧೈರ್ಯದಿಂದಿರುವದು

## (2 ಕೊರಿಂಥ 4:8-5:10)

*“ನಾವು ನೋಡುವವರಾಗಿ ನಡೆಯದೇ ನಂಬುವವರಾಗಿಯೇ ನಡೆಯುತ್ತೇವೆ” (5:7).*

ನಾವು ನಮ್ಮ ಸ್ಥಳೀಯ ಸಭೆಯ ಇತಿಹಾಸವನ್ನು ಬರೆಯುವುದಾದರೆ ಹಳೆಯ ಲಘು ಪ್ರಕಟನೆಗಳನ್ನು ಮತ್ತು ನಮ್ಮ ಸಂಪನ್ಮೂಲದ ಇತರ ಹಳೆಯ ದಾಖಲೆಗಳನ್ನೂ ಪ್ರಾಯಶಃ ಸಾಮಾನ್ಯವಾಗಿ ಪ್ರತಿಯೊಂದು ಚರ್ಚಿನಲ್ಲಿ ಒಂದು ಸರ್ವಸಾಮಾನ್ಯವಾದ ಸಂಗತಿಯು ಯಾವಾಗಲೂ ಕಂಡುಬರಬಹುದಾಗಿರುತ್ತದೆ. ದೊಡ್ಡ ಉತ್ಸಾಹದೊಂದಿಗಿನ ಹೊಸ ಸೇವೆಯ ಆರಂಭದ ವಿಧವನ್ನು ನಮ್ಮ ದಾಖಲೆಗಳು ಪ್ರಕಟಿಸುವಂತವು ಆಗಿದ್ದು, ಕೌತುಕವು ಮುಗಿದ ನಂತರ ನಮ್ಮ ನಿರಾಶೆಯು ಮಾತ್ರ ನಮ್ಮನ್ನು ಹಿಂಬಾಲಿಸುವದು. ಉದಾಹರಣೆಗಾಗಿ ಬಸ್ಸ್ ಸೇವೆ ಮತ್ತು ಭೇಟಿಗಳ ಕಾರ್ಯಕ್ರಮ, ಇವುಗಳು ಬಲು ಹೆಚ್ಚಾಗಿ ಸ್ವಯಂ ಸೇವಕರನ್ನು ಆಕರ್ಷಿಸುವವುಗಳು ಆಗಿದ್ದು ಇವುಗಳನ್ನು ನಾವು ಕಾರ್ಯಕ್ರಮ ಮೊದಲ ಪ್ರಕಟನೆಯು ಆದ ನಂತರ ಬಳಸಬಹುದು. ಆದರೆ ಮೇಲಿಂದ ಮೇಲೆ, ಸ್ವಯಂ ಸೇವರ ಸಂಖ್ಯೆಯು ಇಳಿದು ಕೊನೆಯಲ್ಲಿ ಕೇವಲ ಕೆಲವರು ಮಾತ್ರ ಕಾರ್ಯಕ್ರಮದ ಉಸ್ತುವಾರಿಗೆ ಉಳಿಯುತ್ತಾರೆ. ಅವರೂ ಸಹ ಈ ನಿಯೋಗಕ್ಕಾಗಿ “ಆಸಕ್ತಿಯನ್ನು ಕಳೆದುಕೊಳ್ಳುವವರಾಗಿರುತ್ತಾರೆ.” ಮುಖ್ಯ ವಾದ ಸೇವೆಯನ್ನು ಬಿಡುವ ಈ ವಿಧದ ಮೂಲಕ, ಹೊಸ ಸೇವೆಯ ಉನ್ನತಿಯ ಬಗ್ಗೆ ನಾವು ಕೂಡಲೇ ನಕರಾತ್ಮಕವಾದ ಧೋರಣೆ ತೆಗೆದುಕೊಳ್ಳುತ್ತೇವೆ.

ತಾವು ಭಿನ್ನವಾದದ್ದನ್ನು ಮಾಡಬಹುದು ಎಂದು ಕೊಂಡ ಅನೇಕ ಸಮರ್ಥ ಜನರು ಇಂಥ ನಿಸ್ತೇಜಗೊಂಡ ಕ್ರಮಕ್ಕೆ ಒಳಗಾಗುತ್ತಾರೆ. ವಾಸ್ತವವಾಗಿ ಸಭೆಯ ಅನೇಕ ಸೇವೆಗಳಲ್ಲಿ ಯಾವ ಕ್ಷೇತ್ರದಲ್ಲಿ ಕೂಡಾ ನಿರಾಶೆಯು ಅಷ್ಟೊಂದು ಗಂಭೀರ ಸಮಸ್ಯೆಯಾಗಿರುವುದಿಲ್ಲ ಎಂದು ನಾನು ಯೋಚಿಸಲಾರೆನು. ಬಸ್ ಸೇವೆಯ ಬಗೆಗೆ ಮತ್ತು ಭೇಟಿ ಇಡುವ ಕಾರ್ಯಕ್ರಮಗಳ ಬಗೆಗೆ ಅಪಾದನೆಯನ್ನು ಇರಿಸುವಂತವರು ತಮ್ಮ ಕಾರ್ಯಕ್ಕಾಗಿ ಸ್ವಯಂಸೇವಕ ಪಟ್ಟಿಯನ್ನು ಮಾಡಲು ಯತ್ನಿಸಿದ ನಂತರ ನಿರಾಶೆಗೆ ಒಳಗಾಗುತ್ತಾರೆ. ಸಂಡೇಸ್ಕೂಲ್ ಶಿಕ್ಷಕರಿಗೆ ಪ್ರತಿವರ್ಷ ಅದೇ ಮಾಮೂಲ ಸಂಗತಿಯಾಗಿದೆ. ಹಿರಿಯರು ಮತ್ತು ಸೇವಕರು ತಾವು ಕಾಣುವಂಥ ಕೇವಲ ಕೊನೆಗೊಳ್ಳದ ಸಮಸ್ಯೆಯ ಕಾರ್ಯದಲ್ಲಿ ದಣಿಯುತ್ತಾರೆ. ನಮ್ಮಲ್ಲಿ ಅನೇಕರು ಕಾರ್ಯಕ್ರಮವನ್ನು ಪ್ರವೇಶಿಸುವ ಮುನ್ನ ನಾವು “ಭಿನ್ನವಾದುದನ್ನು ಮಾಡುವೆವು” ಎಂದು ಯೋಚಿಸುತ್ತಾರೆ, ಆದರೆ ನಾವು ಹಾಗೆ ಮಾಡಬಹುದೇ ಎಂಬ ಸಂಶಯಕ್ಕೆ ಒಳಗಾಗುತ್ತಾರೆ. ನಮ್ಮ ಸೇವೆಯ ಅಪಾಯವು ಒಳ್ಳೆಯ ಯೋಚನೆಗಳ ಕೊರತೆಯಿಂದಲ್ಲ ಆದರೆ ಸಮರ್ಥ ಜನರ ಕೊರತೆಯೇ ಆಗದೆ ಎಂದು ನನಗೆ ಮನವರಿಕೆ ಆಗಿದೆ. ನಮ್ಮ ಸಮಸ್ಯೆಯು ನಾವು ಕೂಡಲೇ “ನಿಸ್ತೇಜಗೊಳ್ಳುವುದೇ” ಆಗಿದೆ.

ನಾವು ಯತಾರ್ಥರಾಗಿದ್ದರೆ, ಸಭೆಯಲ್ಲಿ ನಡೆಯುವ ಅನೇಕ ಸೇವೆಗಳು ನಿರಾಶೆಯನ್ನು ಉಂಟುಮಾಡುವುಗಳು ಆಗಿವೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಪ್ರತಿಯೊಬ್ಬ ಸಂಡೇಸ್ಕೂಲ್ ಶಿಕ್ಷಕ/ಶಿಕ್ಷಕಿಗೆ ವಿಶಿಷ್ಟವಾದ ಬದಲಾವಣೆ ತರುತ್ತಿದ್ದೇನೆ ಗ್ರಹಿಸಿಕೊಳ್ಳುವದು ಕಷ್ಟಸಾಧ್ಯ

ವಾಗಿದೆ. ಫುಲ್ಪುಟ್ ಸೇವಕನು ತಾನು ಪ್ರತಿಯೊಂದನ್ನೂ ಮಾನಮಾಡಬಲ್ಲ, ಕೆಲ ಯಶಸ್ಸಿನ ಕ್ರಮಗಳನ್ನು ಹೊಂದಿದ ಉಲ್ಲಾಸದ ಸಂಸ್ಕೃತಿಯಲ್ಲಿ ವಾಸಿಸುವವನಾಗಿದ್ದಾನೆ ಎಂದು ತಿಳಿದಿದ್ದಾನೆ. ನೀವು ಪರಿವರ್ತಿತ ಜೀವಿತವನ್ನು ಹೇಗೆಮಾನಮಾಡುತ್ತೀರಿ? ಸಭೆಯನ್ನು ಕಟ್ಟುವಲ್ಲಿ ನಿಮ್ಮ ಶ್ರಮವು ಯಾವಾಗ ನಿರ್ಣಾಯಕವಾಗುವದು ಎಂದು ಹೇಗೆ ತಿಳಿಯುತ್ತೀರಿ? ಅಲ್ಲಿನ ಸಭೆಗಳು ಅಸಂಖ್ಯಾತ ಯಶಸ್ಸುಗಳು ಸಹಜವಾಗಿ ಮಾನಮಾಡಲ್ಪಟ್ಟಿರುವುದಿಲ್ಲ. ನಮ್ಮ ಕೆಲಸವು ವಿಭಿನ್ನತೆಯನ್ನು ಮಾಡಿದುದರ ಸ್ಪಷ್ಟವಾದ ಪುರಾವೆಯನ್ನು ನಾವು ಬಯಸುವವರಾಗಿರುತ್ತೇವೆ. ಹೊಸದಾದ ಶೈಕ್ಷಣಿಕ ವಿಭಾಗವನ್ನು ಸಾಮಮುಕ್ತ ಕಟ್ಟಡವನ್ನು ಮತ್ತು ನಮ್ಮ ಯಶಸ್ಸನ್ನು ತೋರಿಸುವ ದಾಖಲೆಯ ಹಾಜರಾತಿನ್ನೂ ನಾವು ಸೂಚಿಸುವವರಾಗಿರುತ್ತೇವೆ. ಅಲ್ಲಿ ಯಶಸ್ವಿಯುತ ಸೇವೆಗಿಂತ ಹೆಚ್ಚಾಗಿ ಈ ಸ್ಪಷ್ಟವಾಗಿ ಕಾಣುವ ಸಂಕೇತಗಳು ಇರಲೇಬೇಕು ಎಂದು ನಾವು ಬಲ್ಲವರಾಗಿದ್ದೇವೆ.

ಉತ್ಸಾಹಭಂಗರಾಗಿರುವದು ಎಂದರೆ "ನೈರಾಶ್ಯತೆ ಹೊಂದುವದು." RSVಯು 4:1, 16ರಲ್ಲಿನ ಈ ಪದವನ್ನು ಬಳಸುತ್ತಿದೆ. ಈ ಪದವು ಹಲವು ಬಾರಿ ನಮ್ಮ ಸಭೆಯವರು "ಧೈರ್ಯಗೆಟ್ಟಾಗ" ಏಕಾಂಗಿಗಳಾಗಿರುವುದಿಲ್ಲ ಎಂಬುದನ್ನು ಸೂಚಿಸಲು ಹೊಸ ಒಡಂಬಡಿಕೆಯಲ್ಲಿ ಬೇಕಾದಷ್ಟು ಸಾರಿ ಬಳಿಕೆಯಾಗಿದೆ. ಹೊಸ ಒಡಂಬಡಿಕೆಯಲ್ಲಿ ಅಡಿಗಡಿಗೆ ಬರುವ ನಿರಾಶೆಯ ಬದಲಿ ಸಲಹೆಯು ಕ್ರೈಸ್ತರು ಯಾವಾಗಲೂ ಉತ್ಸಾಹಭಂಗದಲ್ಲಿಯೇ ಬೆಳೆಯುತ್ತಾರೆ ಎಂಬುದನ್ನು ಸೂಚಿಸುವುದಾಗಿದೆ. ಶಿಷ್ಯರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಿಡಿದ ಹಠವನ್ನು ಸಾಧಿಸುವ ವಿಧವೆಯ ಮನವಿಯನ್ನು ನಿರಾಕರಿಸುವಂತಹ ಅನ್ಯಾಯಗಾರಿಯಾದ ನ್ಯಾಯಾಧೀಶನ ಬಗೆಗಿನ ಸಾಮ್ಯವನ್ನು ಯೇಸು ಹೀಗೆ ಹೇಳಿದನು: "ಬೇಸರಗೊಳ್ಳದೆ ಯಾವಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬುದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು" (ಲೂಕ 18:1). ಪ್ರತ್ಯಕ್ಷವಾಗಿ, ಬರಲಿರುವ ದೇವರ ರಾಜ್ಯದ ಬಗೆಗಿನ ತನ್ನ ಶಿಷ್ಯರ ಪ್ರಾರ್ಥನೆಯು ಯಾವುದೇ ಫಲಿತಾಂಶವನ್ನು ಕಾಣದ್ದರಿಂದ ಈ ಸಾಮ್ಯವನ್ನು ಆತನು ಹೇಳಿದನು.

ಹಲವು ಬಾರಿ ಪೌಲನು ಕ್ರೈಸ್ತರಿಗೆ "ಧೈರ್ಯಗೆಡಬಾರದು" ಎಂಬ ಸಲಹೆಯನ್ನು ನೀಡಿದ್ದಾನೆ. ಆತನು ಗಲಾತ್ಯ (6:9) ಮತ್ತು ಕೊರಿಂಥದ ಎರಡು ಸಭೆಗಳಿಗೆ ಬರೆಯುತ್ತಾ "ಒಳ್ಳೆಯದನ್ನು ಮಾಡುವಲ್ಲಿ ಬೇಸರಗೊಳ್ಳದೇ ಇರೋಣ" ಎಂದು ಹೇಳುತ್ತಾನೆ. ಎಫೆಸ ಸಭೆಯವರಿಗೆ ಪೌಲನ ಸಂಕಷ್ಟಕ್ಕಾಗಿ "ಧೈರ್ಯಗೆಡಬೇಡಿರಿ" ಎಂದು ಹೇಳಿದ್ದಾನೆ. ಆದ್ದರಿಂದ ಸೇವೆಯು "ನಿರಾಶೆಯು" ಶೋಧನೆಗೆ ಸಂಘರ್ಷಕ್ಕೆ ಒಳಗಾಗುವದು ಎಂದು ಪೌಲನು ತಿಳಿದಿದ್ದನು.

2 ಕೊರಿಂಥದ ಎರಡು ಸಂದರ್ಭಗಳಲ್ಲಿ ಪೌಲನು "ನಾವು ಧೈರ್ಯಗೆಡುವುದಿಲ್ಲ" (4:1, 16) ಎಂದು ಹೇಳುತ್ತಾನೆ. ವಾಸ್ತವವಾಗಿ, ಕೊರಿಂಥದವರ ಜೊತೆಗಿನ ಆತನ ಚರ್ಚೆಯು ಮಹತ್ವಪೂರ್ವವಾದುದಾಗಿದೆ ಎಂಬ ಈ ಹೇಳಿಕೆಯನ್ನು ಪೌಲನು ಪುನರಾವರ್ತಿಸುವದು ಇದು ಸೂಚಿಸುವುದಾಗಿದೆ. ಪ್ರತ್ಯಕ್ಷವಾಗಿ, ಸೇವೆಗೆ ಸವಾಲನ್ನು ಎಸೆಯುವವರಾಗಿರುವವರಿಗೆ ಮತ್ತು ಆತನಿಗೆ ನಿರಾಶೆಯಾಗಿದೆ ಎಂದು ಸೂಚಿಸುವವರಿಗೆ ಪೌಲನು ಉತ್ತರಕೊಡಬೇಕಾಗಿದೆ! ಆತನ ಬಲಹೀನತೆ, ಆತನ ದೌರ್ಬಲ್ಯ, ಮತ್ತು ಆತನ ಅನೇಕ ಸೋಲುಗಳು ಆತನು ಒಬ್ಬ ಸೋಲಿಸಲ್ಪಟ್ಟ ಮನುಷ್ಯ ಎಂಬ ಅರ್ಥವನ್ನು ಹೊಂದಿದೆ! ಮಾನವ ಮಟ್ಟದಿಂದ ಆತನ ಸೇವೆಯು ವಿಫಲವಾಗಿತ್ತು. ಕೊರಿಂಥ ಸಭೆಯು ಎಷ್ಟು ದೊಡ್ಡ ಸಭೆಯೆಂದು ನಾವು ತಿಳಿದಿಲ್ಲ, ಆದರೆ ಸಭೆಯು ತೊಂದರೆದಾಯಕ ಮತ್ತು ತಿರುಗಿಬೀಳುವ ಸಭೆಯಾಗಿತ್ತು ಎಂದು ನಾವು ಬಲ್ಲವರಾಗಿದ್ದೇವೆ. ಪೌಲನ ಆರೋಗ್ಯವು ವಿಫಲವಾಗುತ್ತಿರಲು ಮತ್ತು ಯಶಸ್ಸಿನ ಯಾವುದೇ ಸೂಚನೆಯು ಅಲ್ಲಿರದೇ ಹೋಗಿದ್ದರೂ ಆತನು ತನ್ನನ್ನು ತಾನು ಸಮರ್ಪಿಸಿಕೊಂಡ ಸಂಗತಿಯನ್ನು ಪ್ರತಿವಾದಿಗಳು ಗಮನಿಸಿದರು ಮತ್ತು ಆತನ ದೇಹದ ಸ್ಥಿತಿಯು "ನಾಶವಾಗುತ್ತಾ

ಇದೆ" (4:16) ಎಂದು ಆತನು ಕಳೆದುಹೋಗುವ ಕಾರಣವನ್ನು ಕೊಟ್ಟಾಗ ಎಂದು ಅವರು ಹಾಸ್ಯಮಾಡಿದರು.

ನಿರಾಶೆಯಲ್ಲಿ ಬಿಟ್ಟು ಕೊಡುವದರಿಂದ ಒಬ್ಬನು ಹೇಗೆ ರಕ್ಷಿಸಿಕೊಳ್ಳಬೇಕು? ಪೌಲನು "ಧೈರ್ಯಗೆಡು" ವವನಾಗಿ ಆಗಿರಬೇಕು ಎಂದು ಪ್ರತಿಪಾದಿಸುವವರಿಗೆ ಪೌಲನ ಉತ್ತರವು ನಮ್ಮಂತವರಿಗೆ ಬಲು ಸಹಾಯಕಾರಿಯಾಗಿದೆ, ಪೌಲನ ಹಾಗೆ ನಮ್ಮ ಗೋಚರವಾಗುವ ಯಶಸ್ಸನ್ನು ಸರಳವಾಗಿ ಅಳತೆ ಮಾಡಲಾಗದು. 4:16-5:10ರಲ್ಲಿ, ಪೌಲನು ತಾನು ಯಾಕೆ ಇತರರು ಹೇರುವಂತೆ ಯಶಸ್ಸಿನ ಮಟ್ಟವನ್ನು ಮಾನಮಾಡದೇ, ಸೇವೆಯನ್ನು ಮುಂದುವರೆಸಿದನು ಎಂಬುದಕ್ಕೆ ಆತನು ಕಾರಣಗಳನ್ನು ಕೊಡುತ್ತಾನೆ.

## ನಾವು ಕಣ್ಣಿಗೆ ಕಾಣುವ ಸಂಗತಿಗಳು ನಾವು ನೋಡುವುದಿಲ್ಲ (4:16-18)

ಹೊರನೋಟಕ್ಕೆ ಪೌಲನಿಗೆ "ಧೈರ್ಯಗೆಡಲು" ಕಾರಣಗಳು ಇದ್ದವು. ಆತನ "ಬಾಹ್ಯವ್ಯಕ್ತಿ"ಯು "ನಾಶವಾಗುತ್ತಾ" ಇದನು (4:16). ಸಾಧ್ಯತೆ ಇರುವ ಒಂದು ಕಾರಣವು ನಿರಂತರವಾದ "ಸಂಕಟ" ಆಗಿತ್ತು. ಅನೇಕರ ಪ್ರಕಾರ, ಆತನು ವಿಫಲನಾದನು ಎಂಬುದರ ಪ್ರಾತ್ಯಕ್ಷಿತೆ ಇದಾಗಿತ್ತು. 2 ಕೊರಿಂಥದ ಉದ್ದಕ್ಕೂ ಪೌಲನ ಧೈಹಿಕ ಬಲಹೀನತೆ, ಮತ್ತು ಸಂಕಟ ಒಂದು ಪ್ರಸಂಗವಾಗಿತ್ತು (ಹೋಲಿಸಿ 4:7, 8). ಆತನು ಯಾವಾಗಲೂ ಕ್ರಿಸ್ತನಿಗಾಗಿ ಸಾಯುವವನಾಗಿದ್ದನು (4:10, 11; ಹೋಲಿಸಿ 1 ಕೊರಿಂಥ 15:31; ರೊಮಾಪುರ 8:36). ಆತನನ್ನು ಕರೆಯಲ್ಪಟ್ಟ ಸೇವೆಯು ಪ್ರತಿಯೊಂದು ಕಾರಣಗಳನ್ನು ಕೊಡುತ್ತಿತ್ತು. ಮಾನವನ ಪಾರಿಭಾಷಿಕೆಯಲ್ಲಿ ಅದು ಉತ್ಸಾಹಭಂಗವೇ ಆಗಿದೆ.

ಒಬ್ಬನ ಶ್ರಮವು ಪ್ರತಿಫಲಿಸದೇ ಇರುವಾಗ ಆತನ "ಧೈರ್ಯಗುಂದೇ" ಹೇಗಿರಬಹುದು? ನಮ್ಮ ಕಾರ್ಯವು ಫಲವನ್ನು ತರುತ್ತದೆ ಎಂದು ನಾವು ನಂಬಿದ್ದಾದರೆ ನಮ್ಮಲ್ಲಿ ಅನೇಕರು ಅನಾನುಕೂಲತೆಯನ್ನು ಮತ್ತು ನೋವನ್ನು ಸಹಿಸಿಕೊಳ್ಳುವವರಾಗಿದ್ದೇವೆ. ನಾವು ಕೊಡಬಯಸುವ ಭವಿಷ್ಯವನ್ನು ಯಾವಾಗ ನಾವು ಇನ್ನು ಮುಂದೆ ನೋಡಲಾರೆವು ಎಂದಾಗ ಇದಾಗುವದು ಸಹಜ. ಬಹುಶಃ ನಮ್ಮ ತ್ಯಾಗವು ಯಾವ ಬೆಲೆಯನ್ನೂ ಪಡೆಯದೆ ಇದ್ದಾಗ ಸಭೆಯಲ್ಲಿನ ನಮ್ಮಲ್ಲಿ ಶ್ರಮದ ಫಲಗಳು ಸಂಪೂರ್ಣವಾಗಿ ವಿಫಲವಾಗುತ್ತವೆ ಕಾಣಿಸಿಕೊಳ್ಳುತ್ತವೆ.

ಪೌಲನು ನಂಬಿಕೆಯ ಕಣ್ಣುಗಳ ಮೂಲಕ ತ್ಯಾಗ ಮತ್ತು ತನ್ನನ್ನು ಪ್ರೋತ್ಸಾಹಿಸಿದ ಮಾರ್ಗಗಳ ಪರಿಣಾಮದ ಮಧ್ಯದ ಸಂಬಂಧವನ್ನು ದೃಷ್ಟಿಸಲು ಸಮರ್ಥನಾದನು. "ನಾಶವಾಗುವ ದೇಹ" ಮತ್ತು ಸಂಕಟಗಳು "ಬಾಹ್ಯವ್ಯಕ್ತಿಗೆ" ಬಾಹ್ಯದೇಹಕ್ಕೆ ಮಿತಿಯುಳ್ಳವುಗಳು ಆಗಿವೆ (ಹೋಲಿಸಿ 12:9). ಆತನ ದೇಹವು ಆತನ ಕಾರ್ಯಗಳ ಒತ್ತಡದಿಂದ ಮತ್ತು ಇತರರಿಂದ ಹಿಂಸೆಯಿಂದಾದ ನೋವು ಇವುಗಳು ಅಧೋಗತಿಯ ಪ್ರಕ್ರಿಯೆ ಆಗಿರಬೇಕು, ಆದರೆ ಆತನ ನೈಜ ಆತ್ಮವು ಬೇಗೆಯಿಂದ ಮತ್ತು ನಿದ್ರೆಯಿಲ್ಲದ ರಾತ್ರಿಗಳಿಂದ ನಾಶವಾಗಲಾರವು. ಪೌಲನು ತನ್ನ ಸಂಕಟವು "ಅಲ್ಪಕಾಲಿಕವೂ" (*elaphron*) ಮತ್ತು "ಹಗುರವೂ" (*parautika*) ಆಗಿದೆ ಎಂದು ಗುರುತಿಸಿದ್ದನು. ನಿತ್ಯವಾದ ಮಹಿಮೆಯ ಜೊತೆಗಿನ ಹೋಲಿಕೆಗೆ ಆತನ ಸಂಕಟವು ತೃಣ ಮಾತ್ರವಾದುದಾಗಿತ್ತು ಎಂದು ಮೊದಲ ಪಾರಿಭಾಷಿಕವು ಸೂಚಿಸುವುದಾಗಿದೆ. ಸಂಕಟದ ಪರಿಣಾಮದ ಪ್ರಮಾಣವು ಮೀರಿಹೋಗಿತ್ತು ಯಾಕೆಂದರೆ ಸಂಕಟಗಳು ಆತನ ಕಾರ್ಯಗಳೊಂದಿಗಿನ ನಿತ್ಯಯುತವಾದ ಪರಿಣಾಮದೊಂದಿಗೆ ಹೋಲಿಸಿದಾಗ ತೃಣಮಾತ್ರವಾದುದ್ದು ಆಗಿತ್ತು.

ಈ ಕ್ಲಿಷ್ಟಮಯ ಕೆಲಸದಲ್ಲಿ ಒಳಗೊಂಡ ಪ್ರತಿಯೊಬ್ಬರೂ "ನಿತ್ಯತ್ವದ" ನಿಯೋಗ ವನ್ನು ಅನುಭವಿಸಿರುತ್ತಾರೆ. ಹಾನಿಯ ವರ್ಷಗಳು ಉದ್ಯೋಗವನ್ನು ಕಲಿಯಲು ಶಾಲೆಗೆ ಹೋಗುವಾಗ ನಿತ್ಯತ್ವವನ್ನು ಮೊದಲು ಕಂಡಂತೆ ಇದೆ. ನಾನು ಕಾಲೇಜಿನಲ್ಲಿರುವಾಗಿನ ಕಷ್ಟಮಯವಾದ

ಬೇಸಿಗೆಯ ಕೆಲಸ ನನಗೆ ನೆನಪಾಗುತ್ತದೆ, ನಿತ್ಯತ್ವವು ಅಂತಿಮವಾದುದು ಎಂದು ನನಗೆ ಖಚಿತವಾಗಿತ್ತು. ಈಗ ಆದಾಗಿ ಅನೇಕ ವರ್ಷಗಳೇ ಕಳೆದುಹೋಗಿವೆ, ಆ ಬೇಸಿಗೆಗಳು ಎಷ್ಟು ಅಲ್ಪಕಾಲಿಕವಾಗಿದ್ದವು ಎಂದು ನಾನು ನೋಡುವವನಾಗಿದ್ದೇನೆ. ಈ ತರದ ದೃಷ್ಟಿಯು ಪೌಲನನ್ನು ಉತ್ಸಾಹಭಂಗ ವಾಗುವುದರಿಂದ ತಪ್ಪಿಸಿತು. ಆ ಕ್ಷಣದ ತಾಳ್ಮೆಯಲ್ಲಿನ ಸಂತಾಪಗಳು ಲಘುವಾಗಿ "ನಿತ್ಯತ್ವದ ಮಹಿಮೆಯ ಪ್ರಭಾವದ" ಜೊತೆಯಾದವು. ವಾಸ್ತವವಾಗಿ, ನೋವಿನ ಕ್ಷಣಗಳು ನೀತಿಯ ಮಾರ್ಗಗಳಿಗೆ ಕೇವಲ ಉಪದ್ರವಗಳು ಆಗಿಲ್ಲ. ಸದಾಕಾಲ ನಮ್ಮ ಸೇವೆಯು ಮನಮಾಡಬಹುದಾದ ಯಶಸ್ಸಿನ ಚಿಹ್ನೆಯನ್ನು ಯಾಕೆ ಹೊಂದಿರುವುದಿಲ್ಲ ಎಂಬುದಕ್ಕೆ ಕಾರಣವು ಉಂಟು, ನಮ್ಮಲ್ಲಿ ಸಹಜವಾಗಿ ಕಾಣುವ ವಿಫಲತೆಗಳು ನಾವು ವಾಸ್ತವದಲ್ಲಿ ನೋಡದಂತಹ ಪರಿಣಾಮಗಳಿಗೆ ನಮ್ಮನ್ನು ಸಿದ್ಧಗೊಳಿಸುತ್ತದೆ.

ಭವಿಷ್ಯದಲ್ಲಿನ ಈ ನಂಬಿಕೆಯು ಪೌಲನ ಸೇವೆಯನ್ನು ಜೀವಂತವಾಗಿ ಉಳಿಸಿತು. "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆ ಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೆಂದೆ ಸರಿ ಎಂದು ಎಣಿಸುತ್ತೇನೆ" (ರೋಮಾಪುರ 8:18) ರಿಂದ ಆತನು ರೋಮಪುರದವರಿಗೆ ಬರೆಯುತ್ತಾನೆ.

> ಕ್ರಿಸ್ತ ಪ್ರೀತಿಯಿಂದ ನಮ್ಮನ್ನು ಆಗಲಿಸುವವರು ಯಾರು? ಕಷ್ಟವೂ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಲ್ಲದಿರುವದೋ ಗಂಡಾಂತರವೋ ಖಡ್ಗವೋ? ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ; ಜನರು ನಮ್ಮನ್ನು ಕೊಯ್ಗುರಿಗಳಂತೆ ಎಣಿಸಿದರು ಎಂಬುದಾಗಿ ಬರೆದಿದೆ (ರೋಮಾಪುರ 8:35, 36) ಎಂದು ಕೇಳುತ್ತಾನೆ.

ಭವಿಷ್ಯದಲ್ಲಿನ ಆತನ ನಿಶ್ಚಿತತೆಯು ಉತ್ಸಾಹಭಂಗತೆ ಬೆಳೆಯದೇ ಆತ್ಮವಿಶ್ವಾಸವನ್ನು ಬೆಳೆಯುವಂತೆ ಮಾಡಿತು.

ನಮ್ಮ ಸಭೆಯ ಕಾರ್ಯಕ್ರಮಗಳು ವಿಫಲವಾದ ಮತ್ತು ನಾಯಕರು "ಅಧೇರ್ಯವುಳ್ಳರಾದ ಇತಿಹಾಸವನ್ನು ಹೊಂದಿದ್ದಾದೆ, ಅದು ನಮ್ಮ ಕಾಲದ ದುಡುಕುತನದ ಬಲಿಪಶುವಾಗು ಸಾಧ್ಯತೆಗಳು ಇವೆ. ತ್ಯಾಗಗಳು ಬಲು ಶ್ರೇಷ್ಟವಾದವುಗಳು ಎಂದು ಹೇಳುವಂತ ಸ್ವಭಾವಗಳು ಪೌಲನ ಭವಿಷ್ಯದ ಭವ್ಯವಾದ ಚಿತ್ರದ ಪರಿಣಾಮವನ್ನು ಎಟಕುವಂತವುಗಳು ಆಗಿಲ್ಲ. ತಕ್ಷಣದ ಪರಿಣಾಮಕ್ಕೋಸ್ಕರದ ನಮ್ಮ ಬೇಡಿಕೆಯು ನಮ್ಮ ಕಾರ್ಯಕ್ರಮಗಳು "ತೀಲಿಬಿಡುವವುಗಳು" ಆಗಿವೆ ಎಂದು ಸಾಧಿಸುವವುಗಳು ಆಗಿದ್ದು ನಮ್ಮ ಸೇವೆಗಳು ನಂಬಿಕೆಯ ಕೊರತೆಯಿಂದ ಕೂಡಿವೆ ಎಂದು ಸೂಚಿಸುವವುಗಳು ಆಗಿವೆ. ದಾರ್ಶನಿಕ ಸಂಕೇತಗಳ ಯಶಸ್ಸಿನ ಬೇಡಿಕೆಯಲ್ಲಿ ಅಪಾಯದ ಇರುವಿಕೆಯು ಇದೆ. ಈ ಹೋಲಿಕೆಗಳಿಂದ ಪೌಲನ ವಿಶ್ವಾಸದ ಆತ್ಮವು ನೋಡದವುಗಳಲ್ಲಿ ಆತನ ವಿಶ್ವಾಸವು ಬೆಳೆದುನಿಂತಿತು.

"ನಾನು ಕಾಣುವಂಥದ್ದನ್ನು ಲಕ್ಷಿಸದೆ ಕಾಣದಿರುವಂಥದ್ದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದ್ದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದ್ದು ಸದಾಕಾವೂ ಇರುವದು" (4:18).

ಪೌಲನ ಸೇವೆಯನ್ನು ಟೀಕಿಸುವವರು ಕೇವಲ "ಬಾಹ್ಯವ್ಯಕ್ತಿಯ" ಮೇಲೆ ಅಳೆಯುವವರು ಆಗಿದ್ದರು, ಮತ್ತು ಪ್ರತಿಗಳಿಗೆಯಲ್ಲಿ ಪ್ರಭಾವರಹಿತವಾಗಿರುವಂತೆ ಅದನ್ನು ಅವರು ಕಂಡರು. ಆದರೆ ಈ ಸೇವೆಯು "ಕಾಣದಂಥ ಸೇವೆಯ" ಬಗೆಗೆ ಆಗಿದೆ ಮತ್ತು ಮಾನಮಾಡಲು ಅಸಾಧ್ಯವಾದುದ್ದು ಆಗಿದೆ. ಇದು "ಆಂತರ್ಯದ ಮನುಷ್ಯನು" ಆಗಿದ್ದು ದಿನೇದಿನೇ ಹೊಸದಾಗುತ್ತಾ ಬರುವಂತದ್ದಾಗಿದೆ (4:16). ಪೌಲನು ಮಹಿಮಾ ಪ್ರಥವಾದ ಭವಿಷ್ಯದ ಬಗೆಗಿನ ತನ್ನ ಮರಿಕೆಯಿಂದ ಮಾತ್ರ ಪ್ರೋತ್ಸಾಹಿಸೂ ಮತ್ತು ಬಲಹೊಂದಿದವನೂ

ಆಗಲಿಲ್ಲ. ಆತನ ಕ್ರಿಸ್ತೀಯ ಜೀವಿತವು ವೇದನಾಯುಕ್ತ ಸತ್ವಪರೀಕ್ಷಿಯಾಗಿದ್ದು ಆ ಭವಿಷ್ಯವು ಪ್ರಾರಂಭಕ್ಕೂ ಮುನ್ನವೇ ಆತನನ್ನು ಬಳಲಿಸಬಹುದಾಗಿತ್ತು. “ದಿನೇದಿನೇ” ಏನು ಸಂಭವಿಸುತ್ತಿತ್ತೆಂಬದು 4:16ರಲ್ಲಿ ಒಂದು ಒತ್ತಿ ಹೇಳುವಿಕೆಯು ಇದೆ. ಪ್ರತಿಯೊಂದು ಕ್ಷಣಗಳಲ್ಲಿ “ಬಾಹ್ಯದ ಮನುಷ್ಯನು ಕ್ಷೀಣಿಸುತ್ತಾ ಬಂದಂತೆ” ಅಂತರ್ಯದ ಮನುಷ್ಯನು ಪುನರ್ವಿಕಲಿಸುತ್ತಾ ಬರುತ್ತಾನೆ. ಕ್ರೀಸ್ತಿಯ ಜೀವಿತವು ಕಾಣದಂಥ ಮತ್ತು ಮಹಿಮೆಯುಳ್ಳ ಭವಿಷ್ಯಕ್ಕಿಂತ ಹೆಚ್ಚಾದುದ್ದನ್ನು ಒಳಗೊಂಡಿದೆ ಎಂದು ಪೌಲನು ತಿಳಿದಿದ್ದನು; ಮಹಿಮಾಯುತ ಒಪ್ಪಿಸುವಿಕೆಯು ಯಾವಾಗಲೂ ಕಾಣದಾಗಿರುತ್ತದೆ. ಮಾನ ಮಾಡುವ ಫಲಗಳು ಮತ್ತು ದೃಶ್ಯಾತ್ಮಕ ಸಂಕೇತಗಳ ಮೇಲೆ ಸೂಚಿಸುವವರಿಗೆ “ದಿನದಿನೇ” ಏನು ಸಂಭವಿಸುತ್ತದೆಯೋ ಅದರಲಿಲ ಕಡುಬರುವುದಿಲ್ಲ. ಆದರೆ ನಂಬಿಕೆಯ ಮೂಲಕ ಒಪಿಪಸುವಿಕೆಯು ಸಹ ಒಳ್ಳೆಯದು ಎಂದು ಪೌಲನು ತಿಳಿದಿದ್ದಾನೆ.

ಪ್ರತಿದಿನದ ಅನೇಕ ಹೋರಾಟಗಳಲ್ಲಿ, “ಹೊಸದದಾಗುವದಕ್ಕಾಗಿ” ಪೌಲನ ಯಾವ ಕರೆಯಲ್ಲಿ ಯಾವ ಸಂಗತಿಯು ಇದೆ (4:16) ಆತನು ಈ ಪತ್ರದ ಮತ್ತೊಂದೆಡೆಯಲ್ಲಿ, ಆ ಸಮಯದಲ್ಲಿ ಅವರು “ಹೊಸಸೃಷ್ಟಿಯಾಗುವರು” ಎಂದು ಎಲ್ಲಾ ಕ್ರೈಸ್ತರಿಗೆ ಸಾಮಾನ್ಯವಾಗಿರುವ ಅನುಭವದ ಬಗೆಗೆ ಮಾತನಾಡಿದ್ದಾನೆ (5:17). ಆದರೆ ಈ ಅತ್ಯಲ್ಪಕಾಲದಲ್ಲಿ ದೇವರ ಶಕ್ತಿಯ ಮೂಲಕ “ಹೊಸದಾಗಿ” ಆಗುವು ಆ ಬಿಡಿಯಾದ ಘಟನೆಯಲ್ಲಿ ನಿಯಮಿತವಾಗಿ ಇರುವುದಿಲ್ಲ. ಅವರ “ಹೊಸದಾಗುವಿಕೆಯು” ನಿರಂತರವಾದದ್ದು; ಅವರು ಮುಂದಕ್ಕೆ ಸಾಗಲು ಸಮರ್ಥರಾಗುವಂತೆ ಇದು ಶಕ್ತಿಯಾಗಿದೆ. “ಹೊಸದಾಗಿ ಇರುವುದಕ್ಕಾಗಿ” ಈ ಆಧಾರವು ನಮಗೊಂದು ಭಾಗವಾಗಿದ್ದು, ಈ ಹಿಂದಿನ ಹೇಳಿಕೆಯಂತೆ ದೇವರ ಸೇವಕರು “ದರ್ಪಣದಲ್ಲಿ ಕಾಣಿಸುವ ಹಾಗಿರುತ್ತಾರೆ”ಎಂಬುದಕ್ಕೆ ಹೋಲಿಕೆಯಾಗಿದೆ (3:18). ಎರಡೂ ಉದಾಹರಣೆಗಳು ಕ್ರೈಸ್ತರು ಸಂಪನ್ಮೂಲಗಳನ್ನು ಮತ್ತು ಹೊಂದಿದ್ದು ತನ್ನನ್ನು ತಾನು “ಅಧೈರ್ಯವುಳ್ಳದರಿಂದ” ದೂರವಿರುವವನಾಗಿದ್ದಾನೆ ಎಂಬುದನ್ನು ಒಳಗೊಂಡಿದೆ, ದಿನೇ ದಿನೇ ಆ ಶಕ್ತಿಯು ದೇವರು ಕೊಡುವ ನಿಯೋಗಕ್ಕೆ ಸಾಧನವಾಗುವನು ಎಂದು ಆತನು ತಿಳಿದಿದ್ದನು.

ಹೊಸ ಒಡಂಬಡಿಕೆಯು ಕ್ರೈಸ್ತರ ಹೊಸದಾಗುತ್ತಿರುವಿಕೆಯು ನಡೆಯುತ್ತಿರುವುದನ್ನು ಪ್ರಸ್ತಾಪಿಸುತ್ತದೆ. ಪೌಲನು ರೋಮಾಪುರದವರಿಗೆ ಬರೆಯುತ್ತಾ “ಇಹಲೋಕದ ನಡವಳಿಕೆಯನ್ನು ಅನುಸರಿಸದೇ ನೂತನ ಮನಸ್ಸನ್ನು ಹೊಂದಿಕೊಂಡು ...” (ರೋಮಾಪುರ 12:2). ಎಂದು ಬರೆಯುತ್ತಾನೆ ಕೊಲಸ್ಸೆಯವರಿಗೆ, “... ಹೊಸತನವನ್ನು ಹೊಂದಿಕೊಳ್ಳಿರಿ” ಎಂದು ಬರೆಯುತ್ತಾನೆ. “ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ನೂತನವಾಗುತ್ತಾ ಪೂರ್ಣಾಜ್ಞಾನವನ್ನು ಉಂಟುಮಾಡುತ್ತದೆ” (ಕೊಲಸ್ಸೆ 3:10). ನೂತನವಾಗಿಸುವಿಕೆಯು ದೇವರ ಕಾರ್ಯವೇ ಹೊರತು ನಮ್ಮದಲ್ಲ. ನಮ್ಮ ಸೇವೆಯು ನಮ್ಮ ಸಂಪನ್ಮೂಲದ ಮೇಲೆ ಆತುಕೊಂಡಿದೆ ಎಂದು ನಂಬಿದ್ದಾದರೆ ಅದು ವಿಫಲವಾಗುತ್ತದೆ. ದೇವರು ನಮ್ಮನ್ನು ಪರಿತ್ಯಕ್ತಗೊಳಿಸಿಲ್ಲ ಎಂದು ನಾವು ಗುರುತಿಸಿಕೊಂಡರೆ “ಅಧೈರ್ಯ” ಗೊಳ್ಳಬೇಕಾಗಿಲ್ಲ.

ನಮ್ಮ ದೇಹವು ನಾಶವಾಗುತ್ತಿದ್ದರೂ ನಮ್ಮ ಅಂತರ್ಯದ ಮನುಷ್ಯನು ಹೊಸದಾಗುತ್ತಾ ಇರುವನು ಎಂಬ ಪೌಲನ ಹೇಳಿಕೆಯಲ್ಲಿ ಮರ್ಮವೊಂದು ಕಂಡುಬರುತ್ತದೆ. ಆತನ ದೇಹವು ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದ ಪ್ರತಿಸಮಯದಲ್ಲಿಯೂ ಆತನು ಹೊಸದೊಂದು ಬಲವನ್ನು ಪಡೆಯುತ್ತಲೇ ಇದ್ದನು. ಈ ನೂತನ ಬಲವು ಆಂತರ್ಯದ ಮನುಷ್ಯನನ್ನು ನಮ್ಮ ಭಾಗವಾದ ನಾಶವಾದಂತಹದನ್ನು ಹೊಂದಿಕೊಂಡಿದೆ. 4:8-10ರಲ್ಲಿ ಸೂಚಿತವಾದ ಎಲ್ಲಾ ನೋವುಗಳಿಗೆ ನಮ್ಮ ದೇಹವು ವಸ್ತುವಾಗಿದೆ, ಆದರೆ ಈ ಬಲಹೀನತೆಯು ನಮ್ಮ ಆಂತರ್ಯಕ್ಕೆ ಯಾವ ಪರಿಣಾಮವನ್ನು ಮಾಡದು. “ಆಂತರ್ಯದ ಮನುಷ್ಯನು” ನಮ್ಮ ಯೋಚಿಸುವ ಮತ್ತು ಚಿತ್ತದ ಭಾಗವಾಗಿದೆ. ಪೌಲನು 7:22ರಲ್ಲಿ ಇದನ್ನು ಪ್ರಸ್ತಾಪಿಸಿದ್ದಾನೆ.

ಎಫೆಸ 3:16ರಲ್ಲಿ "ನಾವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲವನ್ನು ಹೊಂದಿದವರಾಗುವ ಹಾಗೆ" ಸುಂದರವಾದ ಪ್ರಾರ್ಥನೆಯನ್ನು ಮಾಡಿದ್ದಾನೆ. ಪೌಲನ ಪ್ರಕಾರ ಬಲವು ಆತನ ಬಲಹೀನತೆಯಲ್ಲಿ ಇದೆ, ಹೊಡೆಯುವದು ಅಥವಾ ನಿದ್ರೆಯಿಲ್ಲದ ರಾತ್ರಿಗಳು ಆತನ ಬಲಕ್ಕೆ ಸಂಬಂಧಿಸಿದಂತೆ ಭಾಗವನ್ನು ಬರಿದುಮಾಡುವವುಗಳು ಆಗಿವೆ ಹೊರತು ನಿತ್ಯತ್ವದ ವಶದಲ್ಲಿರುವ ಭಾಗವನ್ನು ಅಲ್ಲ.

ಪೌಲನ ಸೇವೆಯು ಕಷ್ಟಕರವಾದುದ್ದು ಎಂದು ಟೀಕಿಸಿದ ವಿರೋಧಿಗಳು ತಾವು ಕಾಣದ ಮತ್ತು ಅಳೆಯಲಾಗದ ಆಂತರ್ಯದ ವ್ಯಕ್ತಿಯ ಶಕ್ತಿಯಲ್ಲಿ ನಂಬುವವರಾದರು ಎಂಬುದು ನಿಸ್ಸಂಶಯವಾದುದ್ದು. ನಾವು ಹಲವು ಬಾರಿ ಪೌಲನ ನಂಬಿಕೆಗಿಂತ ಅವರ ಬೇಡಿಕೆಗಳಲ್ಲಿ ಹೆಚ್ಚಾದ ಯೋಗ್ಯತೆಯನ್ನು ಅನುಭವಿಸುವವರಾಗಿದ್ದೇವೆ! ಅಂತರ್ಯದ ಸಂಗತಿಗಳು ಬಲದ ಸಂಕೇತವಾಗಿ ದೃಶ್ಯಾತ್ಮಕದಂತೆ ಚರ್ಚಿನ ಮುಖ್ಯಾಂಶದಲ್ಲಿ ದಾಖಲಾಗಿರುವುದಿಲ್ಲ. ಅದಲ್ಲದೆ ನಮ್ಮ ಸೇವೆಯು ಅಂತರ್ಯದ ಸಂಗತಿಗಳ ಮೇಲೆ ಅಧಿಕೃತವಾಗಿದೆ ಎಂದು ನಾವು ಯಾರಿಗೂ ಸುಲಭವಾಗಿ ಸಾಧಿಸಲೂ ಆಗದು. ನಮ್ಮನ್ನು ಪ್ರೋತ್ಸಾಹಿಸುವ ದೃಶ್ಯಾತ್ಮಕ ಸಂಕೇತಗಳ ಇಚ್ಛೆಯನ್ನು ನಾವು ಪೌಲನ ಟೀಕಾಕಾರರ ಜೊತೆ ಹಂಚಿಕೊಳ್ಳಬಹುದು. ಪೌಲನ ಶಕ್ತಿಯ ಅನುಭವವು "ಅಧೈರ್ಯಗೊಳ್ಳುವುದರಿಂದ" ಆತನನ್ನು ತಪ್ಪಿಸುವುದಾಗಿದ್ದು ಗಮನಕ್ಕೆ ಬಾರದ್ದು ಆಗಿದೆ.

ಈ ಬೆಲೆಯುಳ್ಳ ಪಾಠವನ್ನು ನಾವು ಕಲಿತಿದ್ದಾರೆ, ನಮ್ಮ ಸೇವೆಯು ಆಮೂಲಾಗ್ರವಾಗಿ ಹೊಸ ಮಾರ್ಗದಲ್ಲಿರುವುದನ್ನು ನಾವು ನೋಡುವವರಾಗಿದ್ದೇವೆ. ನಾವು ವಿಫಲರಾಗುವಿಕೆಯು ನಮಗೆ ಎಲ್ಲಿ ಕಂಡುಬರುತ್ತದೋ ಆ ಪ್ರತಿ ಸ್ಥಳದಲ್ಲಿ ನಾವು ಬಲವನ್ನು ಕಂಡುಕೊಳ್ಳಲು ಸಮರ್ಥರಾಗುತ್ತೇವೆ. ಚರ್ಚಿನ ಕಾರ್ಯಕ್ರಮದಲ್ಲಿನ ಹತಾಶೆಯು ಆತ್ಮೀಕವಾಗಿ ಬೆಳೆಯಲು ನಮಗೆ ಅವಕಾಶವಾಗಿದೆ. ನಮ್ಮ ನಂಬಿಕೆಗೆ ಸವಾಲಾಗಿರುವ ನಮ್ಮ ಅನಾರೋಗ್ಯವು ಆತ್ಮೀಕ ಸಂಪನ್ಮೂಲವು ಅಭಿವೃದ್ಧಿಗೊಳ್ಳುವಲ್ಲಿ ಅವಕಾಶವನ್ನು ಮಾಡಿಕೊಡುತ್ತದೆ. ಅಧಿಕೃತ ಕ್ರೈಸ್ತತ್ವವು "ದೇಹದ" ಯಶಸ್ಸಿನತ್ತ ನೋಡುವುದಿಲ್ಲ, ಆದರೆ "ಆಂತರ್ಯದ ದೇಹದ" ಬಲವು ಎಂದಿಗೂ ಅಳತೆಮಾಡಲ್ಪಡುವುದಿಲ್ಲ.

## ನಾವು ಧೈರ್ಯವಂತರಾಗಿದ್ದೇವೆ (5:1-10:)

5:1-10ರಲ್ಲಿ ಪೌಲನು "ಕಾಣದಂಥದ್ದನ್ನು" ಮತ್ತು "ನಿತ್ಯವಾದ" ಸಂಗತಿಗಳನ್ನು ಬಹುವಿವರವಾಗಿ ವರ್ಣಿಸುತ್ತಾನೆ. ಅವುಗಳನ್ನು ವರ್ಣಿಸಲು ಸ್ಫುಟವಾದ ದೃಷ್ಟಾಂತಗಳನ್ನು ಬಳಸಲಾಗಿದೆ. ನಮ್ಮ ನಶ್ವರವಾದ "ಗುಡಾರವನ್ನು" ಕಿತ್ತು "ಕಟ್ಟಡವನ್ನು" ಕಟ್ಟಬೇಕಾಗಿದೆ. "ಪರಲೋಕದಿಂದ ದೊರಕುವ ನಿವಾಸವನ್ನು" ನಾವು ಹೊಸ ಬಟ್ಟೆಯನ್ನು ಧರಿಸುವ ಹಾಗೆ "ದೇಹದ ಮೇಲೆ ಧರಿಸಿಕೊಳ್ಳಬೇಕು" (5:2). ಈ ಪದಗಳು ಅರ್ಥೈಸಿಕೊಳ್ಳಲು ಸುಲಭಸಾಧ್ಯವೇನಲ್ಲ. ಭವಿಷ್ಯಕ್ಕಾಗಿ ಪೌಲನ ಮಾತುಗಳನ್ನು ಬಳಸುವಲ್ಲಿನ ನಮ್ಮ ಸ್ವಾಭಾವಿಕ ತಾತ್ಪರ್ಯವು ನಮ್ಮ ಭವಿಷ್ಯದ ಜೀವಿತದ ನಮ್ಮದೇ ಆದ ವಿವರವಾದ ಚಿತ್ರಣದ ನಿಟ್ಟಿನಲ್ಲಿರುವ ಫಲವಾಇದೆ. ಪೌಲನು ತಾನು ಕ್ರಿಸ್ತನ ಜೊತೆಹೋಗಬಹುದಾದ ಸಮಯದಲ್ಲಿ ಆತನಿಗಿರುವ ನಿರೀಕ್ಷೆಯ ಬಗೆಗೆ ಬಿಟ್ಟೂಬಿಡದೇ ಮಾತನಾಡುತ್ತಾನೆ (ಫಿಲಿಪ್ಪಿ 1:23). 1 ಕೊರಿಂಥದಲ್ಲಿ, ಕ್ರಿಸ್ತನು ಎದ್ದು ಬರುವಾಗ ಯಾರು ಆತನ ವರವಾಗಿರುತ್ತಾರೋ (ಕರ್ತನವರು) ಅವರು ಎದ್ದು ಬರುವರು ಎಂದು ಆತನು ಹೇಳುತ್ತಾನೆ (1 ಕೊರಿಂಥ 15:23). 1 ಮತ್ತು 2 ಥೆಸಲೋನಿಕದಲ್ಲಿ ಕರ್ತನ ಬರೋಣದ ದಿನವನ್ನು ಸ್ಫುಟವಾಗಿ ವಿವರಿಸಿದ್ದಾನೆ. ಈ ಎಲ್ಲಾ ಪರಿಚ್ಛೇದಗಳು ಹೇಗೆ ಒಂದಕ್ಕೊಂದು ಹಾಸುಹೊಕ್ಕಾಗಿವೆ ಎಂಬುದನ್ನು ನಾವು ತಿಳಿದುಕೊಳ್ಳುವ ಆಕಾಂಕ್ಷೆಯು ನಮಗಿರುವದು ಸ್ವಭಾವಿಕವಾದುದ್ದು. ಯಾವಾಗ ನಾವು "ಪರಲೋಕದಿಂದ ದೊರಕುವ ನಿವಾಸವನ್ನು" ನಮ್ಮ "ದೇಹದ ಮೇಲೆ ಧರಿಸಿಕೊಳ್ಳಬೇಕು"? "ಹೇಗೆ" ಮತ್ತು "ಯಾವಾಗ"

ಎಂಬ ಪ್ರಶ್ನೆಗಳು ಜನರನ್ನು ಅನೇಕ ವರ್ಷಗಳವರೆಗೆ ಎಳೆಯುವವುಗಳು ಆಗಿವೆ.

ಕೊನೆಯ ಹಂತದಲ್ಲಿ ನಾವು ಗಮನಿಸದಂತೆ ಅಂತಿಮ ಸಮಯದ ಸಂಗತಿಯು ಮಾಡಿದ ಹಾಗೆ ಯಾವುದೇ ವಿಷಯವು ಅದರಷ್ಟು ದೊಡ್ಡ ಸಂಖ್ಯೆಯಲ್ಲಿಯ ಜನರನ್ನು ತನ್ನತ್ತ ಎಳೆದುಕೊಳ್ಳಲಿಲ್ಲ. ಚಲನಚಿತ್ರಗಳು ಮತ್ತು ಜನಪ್ರಿಯ ಪುಸ್ತಕಗಳು ದೇವರು ನಮ್ಮ ಇತಿಹಾಸಕ್ಕೆ ಒಂದು ಪರಿಸಮಾಪ್ತಿಯನ್ನು ಹೇಗೆ ಮತ್ತು ಯಾವಾಗ ತರುವನು ಎಂಬುದನ್ನು ತಿಳಿಯಬಯಸುವ ಮಿಲಿಯಗಟ್ಟಲೆ ವೀಕ್ಷಕರನ್ನು ಹಂಚಿಕೊಂಡಿತು. ಇಲ್ಲಿ ಅವರು ಪೌಲನಿಗಿಂತಲೂ ಹೆಚ್ಚಾದ ಊಹಾತ್ಮಕ ಪ್ರಶ್ನೆಗಳಲ್ಲಿ ಆಸಕ್ತಿಯುಳ್ಳವರಾಗಿದ್ದರಬಹುದು ಎಂದೆನ್ನಿಸುತ್ತದೆ. 5:1-4ರಲ್ಲಿನ ಕ್ಲಿಷ್ಟಮಯ ವಚನಗಳಲ್ಲಿ, ಪೌಲನ ವರ್ಣನೆಯ ಪ್ರಯತ್ನವು ಅವರ್ಣನೀಯವಾದುದ್ದು. ಆತನು ಈಗ ನಾವು ನೆಲೆಸಿರುವ ನಶ್ವರವಾದ ಗುಡಾರ ಮತ್ತು ದೇವರು ಸಿದ್ಧಮಾಡಿರುವ ನಿವಾಸಗಳ ಮಧ್ಯ ಬಹುತರವಾದ ಅಂತರವಿರುವುದನ್ನು ತೋರಿಸಲು ಆತನು ಅಪೇಕ್ಷಿಸುವವನಾಗಿದ್ದಾನೆ. ಒಬ್ಬನು ಕಣ್ಣಿಗೆ ಕಾಣುವಂತಹ ಸಂಗತಿಗಳಿಗೆ ಅಧೀನನಾದನು ಮತ್ತು ಇನ್ನೊಬ್ಬನು ಕಾಣದ ಜಗತ್ತಿಗೆ ಅಧೀನನಾದನು.

“ಇಹಲೋಕದ ಗುಡಾರವು” ದೇಹಕ್ಕೆ ಯೋಗ್ಯವಾದ ದೃಷ್ಟಾಂತವಾಗಿದೆ. ಅರಸನಾದ ಹಿಜ್ಕೀಯನು ಅನಾರೋಗ್ಯದಿಂದ ಸ್ವಸ್ಥನಾದ ನಂತರದಲ್ಲಿನ ಆತನ ಮಾತುಗಳನ್ನು ಯೆಶಾಯ 38:12ರಲ್ಲಿ ದಾಖಲಿಸಲಾಗಿದೆ.

> ನನ್ನ ಆಶ್ರಯವು ಕುರುಬನ ಗುಡಾರದಂತೆ ಕಿತ್ತು ನನ್ನ ಕಡೆಯಿಂದ ಒಯ್ಯಲ್ಪಟ್ಟಿದೆ; ಆತನು ನನ್ನ ಆಯುಷ್ಯದ ಹಾಸನ್ನು ಕತ್ತರಿಸಿದ್ದರಿಂದ ನೆಯಿಗೆಯವನಂತೆ ನನ್ನ ಜೀವಮಾನವನ್ನು ಸುತ್ತಿಬಿಟ್ಟಿದ್ದೇನೆ; ಉದಯದಿಂದ ಅಸ್ತಮಾನದೊಳಗೆ ನನ್ನನ್ನು ತೀರಿಸುತ್ತೀ.

ನನ್ನ ಆಶ್ರಯವು ಕುರುಬನ ಗುಡಾರದಂತೆ ಕಿತ್ತು ನನ್ನ ಕಡೆಯಿಂದ ಒಯ್ಯಲ್ಪಟ್ಟಿದೆ. ಕ್ಷಣಿಕವಾದ ಮತ್ತು ವೇದನೆಯುಕ್ತ ಜೀವನವನ್ನು ವರ್ಣಿಸುತ್ತಾನೆ (ಯೋಬ 4:19). ಗೂರದ ಈ ದೃಷ್ಟಾಂತವು ನಮ್ಮ ದೇಹದಲ್ಲಿ ಇರುವಿಕೆಯು ಎಷ್ಟು ಕ್ಷಣಿಕವಾದುದ್ದು ಎಂಬುದನ್ನು ಸೂಚಿಸುವುದಾಗಿದೆ. ವಾಸ್ತವವಾಗಿ, ಪೌಲನು ಗುಡಾರದಲ್ಲಿನ ಈ ಜೀವಿತದಲ್ಲಿ ನರಳಾಟವೂ, ನಿಟ್ಟಿಸಿರುಬಿಡುವಿಕೆಯೂ ಮತ್ತು ಕಳವಳವೂ ತುಂಬಿದೆ ಎಂದು ಹೇಳುತ್ತಾನೆ (5:2, 4). ಈ “ಐಹಿಕ ಗುಡಾರವು” ಖಚಿತವಾಗಿ ನಾಶವಾಗುವ ಕ್ಷಣಿಕವಾದ ಸಂಗತಿಗಳಿಂದ ಮಾಡಲ್ಪಟ್ಟಿದೆ (5:1).

ಪೌಲನ ಸೇವೆಯನ್ನು ಟೀಕಿಸುವವರು ಐಹಿಕ ಗುಡಾರದಲ್ಲಿನ ವಾಸಿಸುವಂತವರ ಜೀವಿತದಲ್ಲಿ ಕಂಡುಬರುವ ನರಳಾಟ, ನಿಟ್ಟಿಸುರುಬಿಡುವಿಕೆ ಮತ್ತು ಕಳವಳ ಕಂಡಿರಬಹುದು. “ಗುಡಾರವನ್ನು” ದೃಷ್ಟಿಸುವಾಗ ಅದು ಕಳಚಿಬಿಟ್ಟದ್ದಾಗಿಯೂ ಮತ್ತು ಆತನ ಸೇವೆಯು ನಿರರ್ಥಕವಾಗಿಯೂ ಇದೆ ಎಂಬ ನಿರ್ಧಾರಕ್ಕೆ ಬಂರು. ಆದರೆ ಪೌಲನು ವಿಭಿನ್ನವಾದ ಮಟ್ಟದ ಅನುಭವವನ್ನು ಹೊಂದಿದ್ದನು. ಆತನು “ನಾವು ನೋಡುವವರಾಗಿ ನಡೆಯದೇ ನಂಬುವವರಾಗಿಯೇ ನಡೆಯುತ್ತೇವೆ” ಎಂದು ಹೇಳುತ್ತಾನೆ (5:7). ಆತನು ದೃಷ್ಟಾತ್ಮಕ ಮಟ್ಟದ ಪ್ರಕಾರ ತನ್ನ ಸೇವೆಯನ್ನು ನಡೆಸುವುದನ್ನು ನಿರಾಕರಿಸಿದನು. ಯಾಕೆಂದರೆ ಸ್ಥಿರವಾದ ಮತ್ತು ಯೋಗ್ಯವಾದ ಕಟ್ಟಡವು ಕಟಟಕಡೆಗೆ ನಶ್ವರವಾದ ಗುಡಾರವನ್ನು ತೆಗೆದುಹಾಕುತ್ತದೆ ಎಂದು ಆತನು ತಿಳಿದವನಾಗಿದ್ದನು. ಈ ಕಟ್ಟಡವು “ಕೈ ಯಿಂದ ಕಟ್ಟಿದ ಮನೆಯಾಗಿರದೆ ನಿತ್ಯವಾಗಿರುವಂಥದ್ದಾಗಿದೆ.” ನಿತ್ಯತ್ವವು ನಿವಾಸವಾಗಿದೆ ಎಂಬ ಅನುಭವವನ್ನು ಆತನು “ತಿಳಿದಿರುವಕ್ಕೋಸ್ಕರವೇ” (5:1) ಆತನು ಈಗ ಸದ್ಯದ ನರಳಾಟ ಮತ್ತು ನಿಟ್ಟಿಸುರುಬಿಡುವಿಕೆಗಳನ್ನು ಸಹಿಸಿಕೊಳ್ಳುವವನಾಗಿದ್ದಾನೆ.

“ನಾವು ನೋಡುವವರಾಗಿ ನಡೆಯದೇ ನಂಬುವವರಾಇಯೇ ನಡೆಯುತ್ತೇವೆ” (5:7)

ಎಂಬುದು ಕ್ರೈಸ್ತನ ಗುರುತಾಗಿದೆ ಎಂದು ಹೇಳುತ್ತಾನೆ. ನಾವು ಪೌಲನ ವಿರೋಧಿಗಳಂತೆ "ನಾವು ನೋಟವವರಾಗಿ ನಡೆಯುವ" ಸರಳವಾದುದನ್ನು ಕಂಡುಕೊಳ್ಳುತ್ತೇವೆ. ಕ್ರಿಸ್ತೀಯ ಜೀವಿತದ ಯೋಚನೆಯು ಈಗಾಗಲೇ "ಜಗತ್ತಿನಾಚೆ" ಇರುವದನ್ನು ಒಳಗೊಂಡಿರುವಂತದ್ದಾದರೆ ಕಳವಳ ಮತ್ತು ಹತಾಶೆಯನ್ನು ದೂರತೆಗೆದುಹಾಕುವುದಾಗಿದೆ ಎಂದು ಕೆಲವರು ಸೂಚಿಸುವವ ರಾಗಿರುತ್ತಾರೆ. ಬಹುಶಃ 12:2ರಲ್ಲಿ ಪೌಲನು ಸೂಚಿಸಿದ ಮೂರನೆಯ ಆಕಾಶದಲ್ಲಿನ ತನ್ನ ಅನುಭವವನ್ನು ಖಂಡಿತವಾಗಿ ಬರೆದದ್ದಾಗಿದೆ. ಯಾಕೆಂದರೆ ಅನೇಕರು ಕ್ರಿಸ್ತೀಯ ಜೀವಿತವು "ಜಗತ್ತಿನಾಚೆ" ಇರುವಂಥದ್ದು ಆಗಿದೆ ಎಂದು ಒತ್ತಿ ಹೇಳುವವರಾಗಿದ್ದಾರೆ. 5:14ರ ಪ್ರಕಾರದ ಕಥೆಯ ಇನ್ನೊಂದು ಬದಿಯು ಅಲ್ಲಿದೆ. ಪರಲೋಕದಲ್ಲಿ ವಾಸಿಸುವುದಕ್ಕೋಸ್ಕರ ನಾವು ಇನ್ನು ಕಾಯುವವರಾಗಿದ್ದೇವೆ ಮತ್ತು ಹಂಬಲವುಳ್ಳವರು ಆಗಿದ್ದೇವೆ. "ನಂಬುವವರಾಗಿ ನಡೆಯು ವಾಗ" ನಾವು "ಭಾರಹೊತ್ತುಕೊಂಡವರಾಗಿ ನರಳುತ್ತೇವೆ" (5:4). ದೃಷ್ಟಾಂತ್ಮಕವಾದ ಸಂಕೇತಗಳ ಆಧಾರದ ನಂಬಿಕೆಯು ಎಂದೆಂದಿಗೂ ನಂಬಿಕೆಯಾಗಲಾರದು (ಹೋಲಿಸಿ ರೋಮಾಪುರ 8:24). ನಂಬಿಕೆಯು ದೇವರಲ್ಲಿ ವಿಶ್ವಾಸವನ್ನು ಒಳೊಂಡಿದ್ದು ಈ ಜಗತ್ತಿನಲ್ಲಿ ಆತನ ಕಾರ್ಯದ ಸಾಕ್ಷಾಗಳನ್ನು ನಾವು ಕಾಣಲಾರೆವು. ಇದು ಕ್ರಿಸ್ತನ ಶಿಲುಬೆಯ ಬಗೆಗೆ ಹಂಚಿಕೊಳ್ಳುವದನ್ನು ಒಳಗೊಂಡಿದ್ದು ಸಕಾರಾತ್ಮಕ ಹೊರಹೊಮ್ಮುವಿಕೆಯು ಕಣ್ಣಿಗೆ ಕಾಣದು. ಅಧಿಕೃತ ಕ್ರೈಸ್ತತ್ವವು ನಾವು ಕಾಣದೇ ಇರುವಂತವುಗಳಲ್ಲಿ ನಮ್ಮ ಜೀವನವನ್ನು ಕಟ್ಟುವಾಗ ಬರುವ ಕಳವಳವನ್ನು ಒಪ್ಪಿಕೊಳ್ಳುವುದನ್ನೂ ಕೂಡ ಒಳಗೊಂಡಿದೆ. ಎರಡನೆಯ ಜಾಗತಿಕ ಯುದ್ಧದ ಆರಂಭದಲ್ಲಿ ಜರ್ಮನಿಯ ಕೊಲೊಗನಿಯಲ್ಲಿನ ನೆಲಮಾಳಿಗೆ ಗೋಡೆಯ ಮೇಲಿನ ಗೀಚುವಿಕೆಯು ದೊಂಬಿ ಮತ್ತು ನಿರಾಶೆಗಳು ನಂಬಿಕೆಯ ಪ್ರಾಯಶ್ಚಿತಕ್ಕೆ ಗುರುತರವಾ ದುದ್ದಾಗಿದ್ದು ಪೌಲನು ಅಂಗೀಕರಿಸಿದಂತವುಗಳಿಗೆ ಸಮಾನವಾದದ್ದು ಆಗಿದೆ:

> ಸೂರ್ಯನು ಬೆಳಕು ಕೊಡದಿದ್ದಾಗಲೂ ಕೂಡಾ, ನಾನು ಆತನ ಆಸ್ತಿತ್ವವನ್ನು ನಂಬುತ್ತೇನೆ;
> ಪ್ರೀತಿಯ ಭಾವನೆ ನನ್ನಲ್ಲಿ ಬಾರದಿದ್ದರೂ ಕೂಡಾ, ನಾನೂ ಅದನ್ನು ನಂಬುತ್ತೇನೆ;
> ದೇವರು ಸುಮನಿದ್ದರೂ ಕೂಡ ನಾನು ಆತನನ್ನು ನಂಬುತ್ತೇನೆ.

ಪೌಲನು ಪರಲೋಕದ ವಾಸಿಸುವಿಕೆಯನ್ನು ನೋಡದಿದ್ದರೂ ಕೂಡಾ ಆತನು ದೇವರನ್ನು ನಂಬುವುದಕ್ಕಾಗಿ ಆರಿಸಿಕೊಂಡನು.

5:1ರಲ್ಲಿ ಪೌಲನು, "ದೇವರಿಂದುಟಾಂದ ಒಂದು ಕಟ್ಟಡವು ಇದೆ" ಎಂದು "ನಾವು ಬಲ್ಲೆವು" ಎಂದು ಆತನು ನೋಡದೇ ಇದ್ದಾಗಲೂ ಕೂಡಾ (5:7) ಹೇಳುತ್ತಾನೆ. (ಗುಡಾರವು) ನಾಶವಾದರೂ ಕೂಡಾ ನಾವು ಹೊಸ ಬಟ್ಟೆಯನ್ನು ಧರಿಸಿಕೊಳ್ಳುವಂತೆಯೇ "ಧರಿಸುವವರಾಗಿರುತ್ತೇವೆ" (5:3). ಅದಕ್ಕೋಸ್ಕರ ನಾವು ಎಂದಿಗೂ "ಏನು ಇಲ್ಲದವರಾಗೆವು" ಎಂಬುದು ಆತನಿಗೆ ನಿಶ್ಚಿತವಾಗಿತ್ತು. ಪೌಲನು ನಾವು ಧರಿಸಬಹುದಾದ ಹೊಸ "ಹೊದಿಕೆಗಳಿಗಾಗಿ" ಮೂರು ವಿಭಿನ್ನ ಪಾರಿಭಾಷಿಕಗಳನ್ನು ಬಳಸಿದ್ದಾನೆ. ನಾವು ಒಂದು "ಕಟ್ಟಡವನ್ನು" (*oikodome*), ಒಂದು "ಮನೆಯನ್ನು" (*oikio*) ಮತ್ತು "ವಾಸಿಸುವಿಕೆಯನ್ನು" (*oiketerion*) ಹೊಂದಿದ್ದೇವೆ. ಈ ಪದಗಳು ಭವಿಷ್ಯದ ಮನೆಯ ಸ್ಥಿರತೆ ಮತ್ತು ಶ್ರೇಷ್ಟತೆಯ ಗುಣಗಳನ್ನು ಸೂಚಿಸುವವುಗಳು ಆಗಿವೆ. ನಮ್ಮ ಆರೋಗ್ಯ ಕ್ಷಿಣಿಸಿಹೋಗಬಹುದು, ದೇವರೊಂದಿಗಿನ ನಮ್ಮ ಸಂಬಂಧವು ಎಂದಿಗೂ ಮುಚ್ಚಿಹೋಗದು ಎಂಬುದನ್ನು ಅವುಗಳು ನಮಗೆ ನೆನಪಿಸುವಂತವು ಆಗಿವೆ. ದೇವರೊಂದಿಗಿನ ನಮ್ಮ ಭವಿಷ್ಯದ ಸಂಬಂಧವನ್ನು ವರ್ಣಿಸಲು ಅನೇಕ ವಿಭಿನ್ನವಾದ ದೃಷ್ಟಾಂತಗಳನ್ನು ನಾವು ಬಳಸಬಹುದು, ಆದರೆ ಇವುಗಳ ಹಿಂದೆ ನಿಶ್ಚಿತತೆಯು ಇದೆ: ನಮ್ಮ ಜೀವವು ಎಂದಿಗೂ ಅಳಿದು ಹೋಗದು ಎಂಬುದು ದೇವರು ನಮಗೆ ಮಾಡಿದ ವಾಗ್ದಾನವೇ ಆಗಿದೆ. ಎಂದಿಗೂ ನಿಂತುಹೋಗದ ಕಾರಣಕ್ಕಾಗಿ ನಾವು

ನಮ್ಮ ಸೇವೆಯನ್ನು ಗೈಯುತ್ತಿದ್ದೇವೆ.

## ಮುಕ್ತಾಯ

ಪೌಲನು ಭವಿಷ್ಯದ ಬಗೆಗೆ ಭಹಿಸುವುದರಲ್ಲಿ ಅಥವಾ ಅಂತ್ಯದಲ್ಲಿನ "ಹೇಗೆ" ಮತ್ತು "ಯಾವಾಗ" ಎಂಬುದರ ಮಧ್ಯದ ಖಾಲಿ ಜಾಗವನ್ನು ಭರ್ತಿಮಾಡುವಲ್ಲಿ ಆಸಕ್ತನಾಗಿರಲಿಲ್ಲ. ತನ್ನ ಟೀಕಾಕಾರರಿಗೆ ತನ್ನ ವಿಫಲತೆ, ವಿಫಲವಾಗುತ್ತಿರುವ ಆತನ ಆರೋಗ್ಯದ ಜೊತೆಯಲ್ಲಿಯೇ, ಫಲಿತಾಂಶಗಳ ಕೊರತೆಯು ಪ್ರತಿಯೊಂದು ಕಾರಣವೂ ಆತನ ಇರುವಿಕೆಯಲ್ಲಿಯೂ ನಿರಾಶನಾಗದೇ ಇದ್ದುದನ್ನು ತೋರಿಸಬೇಕೆಂಬ ಬಯಕೆಯು ಆತಬಲ್ಲಿ ಇತ್ತು. "ಸದಾ ಧೈರ್ಯದಿಂದಿರುವದು" ಪೌಲನ ನಿಲುವಾಗಿತ್ತು (5:6; ಹೋಲಿಸಿ 5:8). ಯಾವುದೇ ಕ್ಷಣಿಕವಾದ ಸೋಲು ಸೇವಕನನ್ನು ನಿರಾಶನನ್ನಾಗಿಸದು ಎಂಬುದನ್ನು ಬಲ್ಲವನಿಗೆ ಶ್ರೇಷ್ಟವಾದ ಭವಿಷ್ಯವು ಈಗಾಗಲೇ ಕೊಡಲ್ಪಟ್ಟಿದೆ. ಯಥಾ ರೀತಿಯಾಗಿ ಹೇಳು ವುದಾದರೆ "ನಾವು ನೋಡುವವರಾಗಿ ನಡೆಯದೇ ನಂಬುವವರಾಗಿಯೇ ನಡೆಯುತ್ತೇವೆ" ಇದೇ ಅಧಿಕೃತ ಕ್ರೈಸ್ತನ ಗುರುತು.